ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಲ್ಲಿರುವ ಅಧಿಕಾರಿಗಳ ಸಂಖ್ಯೆ

೫೯೮. ಶ್ರೀ ಗೋಪಾಲ ಎಂ. ಕಾನಡೆ (ಸಿರ್ಸಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.—

ಅ) ಕರ್ನಾಟಕ ಗೃಹ ಮಂಡಳಿಯ ನೌಕರರ ಸಂಖ್ಯೆ ಎಷ್ಟು? ಇವರುಗಳಲ್ಲಿ ಇಂಜಿನಿಯರುಗಳ ಸಂಖ್ಯೆ ಎಷ್ಟು ?

ಆ) ನಕಾಶೆ ಬಿಡಿಸುವ ಕೆಲಸವೇ ಗೊತ್ತಿಲ್ಲದ ಇಂಜಿನಿಯರುಗಳನ್ನು ಮಂಡಳಿಯಲ್ಲಿ ನೇಮಿಸಿ ಕೊಂಡಿರುವುದು ನಿಜವೇ ಹಾಗಿದ್ದಲ್ಲಿ ವಿವರ ನೀಡುವುದು ?

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಕರ್ನಾಟಕ ಗೃಹ ಮಂಡಳಿಯಲ್ಲಿನ ಒಟ್ಟು ನೌಕರರ ಸಂಖ್ಯೆ: ೧೦೨೨ ಇವರುಗಳಲ್ಲಿ ೧೩೪ ಜನ ಇಂಜಿನಿಯರುಗಳು.

ಆ) ಇಲ್ಲ.

ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯ ವ್ಯಾಪ್ತಿಯಲ್ಲಿನ ನಿವೇಶನಗಳನ್ನು ಸಂಘ ಸಂಸ್ಥೆಗಳಿಗೆ, ವ್ಯಕ್ತಿಗಳಿಗೆ ನೀಡಿರುವ ವಿವರ

೫೯೩. ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ ಶಹರ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

೧) ೧೯೮೬ರಿಂದ ಈವರೆಗೆ ಧಾರವಾಡ ಮಹಾ ನಗರಸಭೆಯ ವ್ಯಾಪ್ತಿಯಲ್ಲಿನ ಬೆಲೆಯುಳ್ಳ ನಿವೇಶನಗಳನ್ನು ಸಂಘ ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗಳಿಗೆ ನೀಡಲಾಗಿದೆಯೇ (ವರ್ಷವಾರು ವಿವರಗಳನ್ನು ಅಂದರೆ ಅವರ ಪೂರ್ಣ ಹೆಸರು ವಿಳಾಸದೊಂದಿಗೆ ತಿಳಿಸುವುದು).—

೨) ಸದ್ಯ ಮಹಾನಗರಸಭೆಗೆ ನಿವೇಶನಗಳಿಗೆ ಬೇಡಿಕೆ ಸಲ್ಲಿಸಿ ಪೆಂಡಿಂಗ್ ಇರುವ ಅರ್ಜಿಗಳ ವಿವರ ಕೊಡುವುದು ?

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).

೧) ಹೌದು.

(ವಿವರಗಳನ್ನು ಪ್ರತ್ಯೇಕ ಪಟ್ಟಿಯಲ್ಲಿ ಸೂಚಿಸಲಾಗಿದೆ).

೨) ಮಹಾನಗರಪಾಲಿಕೆಯಲ್ಲಿ ನಿವೇಶನ ಮಂಜೂರಿ ಬಗ್ಗೆ ಯಾವ ಬೇಡಿಕೆಗಳು ಬಾಕಿ ಇರುವುದಿಲ್ಲ. ಮಹಾನಗರಸಭೆ ನಿವೇಶನಗಳ ಬೇಡಿಕೆ ಸ್ವೀಕೃತಿ ಆದ ತಕ್ಷಣ ಅರ್ಜಿಗಳನ್ನು ಪರಿಶೀಲಿಸಲು ಹುಬ್ಬಳ್ಳಿ-ಧಾರವಾಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಆಗಿಂದಾಗ್ಗೆ ವರ್ಗಾಯಿಸಲಾಗುತ್ತಿದೆ.

ತುಮಕೂರಿನಲ್ಲಿನ ಕರ್ನಾಟಕ ಗೃಹ ಮಂಡಳಿಯಿಂದ ಮನೆಗಳು

೫೨೬. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).— ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ೧೯೮೦ನೇ ಸಾಲಿನಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ತುಮಕೂರಿನಲ್ಲಿ ಮಧ್ಯಮ ವರ್ಗ ಹಾಗೂ ಅಲ್ಪ ಆದಾಯದವರಿಗಾಗಿ ಅರ್ಜಿ ಕರೆಯಲಾಗಿದ್ದು ನಿಜವೇ ?

ಆ) ಹಾಗಿದ್ದಲ್ಲಿ ಇದುವರೆವಿಗೂ ಸಾರ್ವಜನಿಕರಿಂದ ಎಷ್ಟು ಅರ್ಜಿಗಳು ಬಂದಿವೆ ?

ಇ) ತುಮಕೂರು ನಗರಕ್ಕೆ ಸೇರಿದ ಶೆಟ್ಟಿಹಳ್ಳಿ ಮರಳೂರು ದಿಣ್ಣೆ ಈ ಎರಡೂ ಹಳ್ಳಿಗಳಿಂದ ಎಷ್ಟು ಅರ್ಜಿಗಳು ಬಂದಿವೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.